ಮೈಸೂರ ಗೆಜೆಟ್.

ನಂ. 18 ಸರ್ಕಾರದಿಂದ ಪ್ರಕಟಿಸಲ್ಪಟ್ಟದ್ದು. ಸನ 1889.

ಬೆಂಗಳೂರು, ಶನಿವಾರ, ಮೇ ತಾ|| 4, ಸನ 1889.

ಈ ಭಾಗವನ್ನು ಪ್ರತ್ಯೇಕ ಸೇರಿಸಿ ಇಡುವ ಬಗ್ಗೆ ಇದಕ್ಕೆ ಬೇರೆಯಾಗಿ ಪುಟ ಸಂಖ್ಯೆ ಕೊಡಲ್ಪಡುತ್ತೆ.

ವಿಷಯ ಸೂಚಿಕೆ.

1ನೇ ಭಾಗ–ಮೈಸೂರು ಮಹಾರಾಜ ರಾಜಾಸಾಹೆಬ್ ಬಹದೂರವರ ಸರ್ಕಾರದಿಂದ ಕೊಡೋಣಾದ ಇಸ್ತಿಹಾರ್‌ನಾಮೆಗಳು.

2ನೇ ಭಾಗ–ರೆಸಿಡೆಂಟರು, ಚೀಫ್ ಜಡ್ಜಿಯವರು, ಸರ್ವೇ ವ ಇನಾಂ ಸೂಪರ್‌ಟೆಂಡೆಂಟರು, ಕಾಂಪ್ಟ್ರೋಲರವರು, ಪಬ್ಲಿಕ್ ವರ್ಕ್ಸ್ ಆಫಿಸರ್‌ಗಳು, ಫಾರೆಸ್ಟು ಇನ್‌ಸ್ಪೆಕ್ಟರ್ ಜನರಲ್‌ಯವರು, ರಜಿಸ್ಟ್ರೇರ್ ಇನ್‌ಸ್ಪೆಕ್ಟರ್ ಜನರಲ್ಲವರು, ಮ್ಯುನಿಸಿಪಲ್ ಬೋರ್ಡು ಪ್ರಸಿಡೆಂಟರು, ಡಿಸ್ಟ್ರಿಕ್ಟ್ ವ ಸೆಷ್ಷ ಜಡ್ಜ್‌ರು, ಡಿ|| ಡೆಪ್ಯುಟಿ ಕವ್ಮಿಷನರುಗಳು, ಸಬಾರ್ಡಿನೇಟ್ ಜಡ್ಜ್‌ರು, ಪೊಲೀಸ್ ಸೂಪರ್‌ಟೆಂಡೆಂಟರು, ಫಾರೆಸ್ಟು ಆಫಿಸರ್‌ಗಳು, ಇವರುಗಳಿಂದ ಕೊಡೋಣಾದ ಇಸ್ತಿಹಾರ್‌ಗಳು ವಗೈರೆ; ಕಾಲಸ್ಥಿತೀ ರಿಪೋರ್ಟುಗಳು; ಪೋಸ್ಟ್ಆಫೀಸ್ ನೋಟಿಸುಗಳು.

3ನೇ ಭಾಗ–ಶ್ರೀಮ್ ಮಹಾರಾಜ ರಾಜಾಸಾಹೆಬ್ ಬಹದೂರವರಿಂದ ಮಂಜೂರ್ಮಾಡಲ್ಪಟ್ಟ ಅಕ್ಟ್ಸುಗಳು ವ ರೆಗ್ಯುಲೇಷ್ಷಗಳು—ಇಲ್ಲ.

4ನೇ ಭಾಗ–ಸರ್ಕಾರೀ ಕಾಗದ ಪತ್ರಗಳು—ಇಲ್ಲ.

೧ನೇ ಭಾಗ.

ಶ್ರೀಮ್ ಮಹಾರಾಜ ರಾಜಾಸಾಹೆಬ್ ಬಹದೂರವರ ಸರ್ಕಾರದಿಂದ ಕೊಡೋಣಾದ ಇಸ್ತಿಹಾರ್‌ನಾಮೆ.

ಜನರಲ್.

ಇಸ್ತಿಹಾರ್‌ನಾಮೆ.

ತಾರೀಖು 30ನೇ ಮಾರ್ಚಿ 1889.

ನಂ. 5.—ಇದರಿಂದ ಸರ್ವರೆ ತಿಳುವಳಿಕೆ ಬಗ್ಗೆ ಪ್ರಕಟಿಸಲ್ಪಡುವದೇನಂದರೆ, 1889—90ನೇ ಸರ್ಕಾರ್ ಸಾಲ್ ಮುರೊ ಲಣಾಯತು ಕಾಫೀ ಸಾಗುವಳಿ ಬಗ್ಯಾಗಿ 1887ನೇ ಇಸವಿ ಮಾರ್ಚಿ 26ನೇ ಮುಕ್ತುಮಿನ ಮೈಸೂರ ಗೆಜೆಟ್ 256–257ನೇ ಪುಟಗಳಲ್ಲಿ ಫಾಯಿಷ್ ಮಾಡಲ್ಪಟ್ಟ ರೂಲ್ಸುಗಳನುಸರಿಸಿ ಅಪೇಕ್ಷಿಸಲ್ಪಡುವಂಥಾ, ಚಿಕ್ಕಮಗಳೂರು, ಮೂಡಿಗೆರೆ ವ ಕೊಪ್ಪ ತಾಲ್ಲೂಕುಗಳು ಇದರಡಿ ಕಂಡ ಮಾಗಣಿಗಳಿಗೆ ಕೇರಿದ ಹಿಡುವಳಿಯಲ್ಲಿ ಇಲ್ಲದ ನಂಬರ್‌ವಾರ್ ಸರ್ಕಾರ ಜಮೀನ್‌ಗಳಿಗೆ ಗೊತ್ತುಮಾಡಲ್ಪಟ್ಟ ಸರ್ಕಾರ್ ಖರೀದಿಯು ದರ ಎಕರೆ 1ಕ್ಕೆ ಹತ್ತು ರೂಪಾಯಿಯಾಗಿರತಕ್ಕದ್ದು.

(1) ಚಿಕ್ಕಮಗಳೂರು ತಾಲ್ಲೂಕಿನ ಖಾಂಡ್ಯ ಮತ್ತು ಜಾಗರ ಮಾಗಣಿಗಳಲ್ಲಿ.
(2) ಮೂಡಿಗೆರೆ ತಾಲ್ಲೂಕಿನ ಕಳಸಾ ವ ಸಂತೆ ಮಾಗಣಿ ಮತ್ತು ಭದ್ರಾನದಿಯ ಕೊರಕಲುಗಳು.
(3) ಯಡೆಹಳ್ಳಿ ಸಬ್ ಡಿವಿಜ್ಞ ದೇಖೀಲ್ ಕೊಪ್ಪ ತಾಲ್ಲೂಕು.

2. ಇದರಿಂದ 1887ನೇ ಇಸವಿಯ ಇಸ್ತಿಹಾರ್‌ನಾಮೆಯಲ್ಲಿ ಗೊತ್ತು ಮಾಡಲ್ಪಟ್ಟಿದ್ದ 5 ರೂಪಾಯಿದರವು ರದ್ದುಮಾಡಲ್ಪಟ್ಟಿರುತ್ತೆ.

ತಾರೀಖು 17ನೇ ಏಪ್ರಿಲ್ 1889.

ನಂ. 10.—ಸರ್ವರ ತಿಳುವಳಿಕೆ ಬಗ್ಗೆ ಇದರಿಂದ ಪ್ರಕಟಿಸುವದೇನಂದರೆ, ಬಳ್ಳಾರಿ ಡಿಸ್ಟ್ರಿಕ್ಟ್ ಹಂಪೆ ಚಿಲಯಣ ಕಾಮಲಾಪುರ ದಲ್ಲಿ ಉಚಾಲ್ ಜಾತ್ರೆ ಉಪಲ್ಯವ ವ್ಯಾಪಸರುತ್ತ, ಮುಂದಿನ ಹಂಪೆ ರಥೋತ್ಸವಕ್ಕೆ ಹೋಗುವಂಥಾ ಜನಗಳು ಆಲ್ಲಿಗೆ ಹೋಗೋಣ ದರಿಂದ ಆಪಾಯಕ್ಕೆ ಬಳಗಾಗುವರೆಂದು ಇದರ ಪರಿಯಿಂದ ಯಚ್ಚರಿಸಲ್ಪಟ್ಟಿರುತ್ತಾರೆ.

ತಾರೀಖು 2ನೇ ಏಪ್ರಿಲ್ 1889.

ನಂ. 3.—ಸ್ 1870ನೇ ಇಸವಿ 10ನೇ ನಂಬರ್ ಲ್ಯಾಂಡ್ ಆಕ್ವಿಜಿಷನ್ ಆಕ್ಟಿನ 4ನೇ ಸೆಕ್ಷನ್ ಅನುಸರಿಸಿ ಇದರಿಂದ ಬಹಿರಂಗ ವಾಗಿ ತಿಳಿಯಪಡಿಸುವದೇನಂದರೆ, ಪುಲ್ಲಹಳ್ಳಿ ನಾಲೇ ಬ್ಯಾಗಿ ನಂಜಿನಗೂಡು ತಾಲ್ಲೂಕು ವೈಕಿ ಇದರಡಿ ನಮೂದಾಗುವ ಗ್ರಾಮಗಳಲ್ಲಿ ರುವ ಜಮೀನು ಆವಶ್ಯಕವಾಗಬಹುದು.

1	ಪುಲ್ಲಹಳ್ಳಿ	17	ಆಲಂಬೂರು
2	ಬೆಳಲಿ	18	ಸರಗೂರು
3	ಹೊಂಗಹಳ್ಳಿ	19	ನಗರ್ಲೆ
4	ಹುಗ್ಗಡಲಹಳ್ಳಿ	20	ಬಸವನಪುರ
5	ಬೇಲೂರು	21	ಕಬ್ಬಿಗೆರೆಹುಂಡಿ
6	ದೊಬ್ಬೂರು	22	ಜನಿಗಂಹಳ್ಳಿ
7	ಹಂದನಹಳ್ಳಿ	23	ಕಾಲಮಹಳ್ಳಿ
8	ಕಲ್ಲಹಳ್ಳಿ	24	ಕುಪ್ಪರವಳ್ಳಿ
9	ಕತ್ತಿಪುರ	25	ಬೆಲಗೆರೆ
10	ಚಾಮಲಾಪುರ	26	ಸುಟ್ಟೂರು
11	ಕುಂಬಹಳ್ಳಿ	27	ಬೆಮರಹಳ್ಳಿ
12	ದೇವರಮ್ಮನಹಳ್ಳಿ	28	ಬೆಳಗೊಲಿ
13	ದೇವರಸನಹಳ್ಳಿ	29	ಇಗ್ಲಿ
14	ಗೋಲೂರು	30	ತಾಯೂರು
15	ಮೂಲೂರು	31	ಡಣಾಯಕನಪುರ
16	ಹೊರ್ಲವಾಡಿ		

ತಾರೀಖು 18ನೇ ಏಪ್ರಿಲ್ 1889.

ಕ್ಯಾಂಪ್ ನಂ. 40.—ಬೆಂಗಳೂರು ಪಟ್ಟಣದ ಈ ಕೆಳಗೆ ನಮೂದಾಗುವ ಮ್ಯುನಿಸಿಪಲ್ ಕಮ್ಮಿಷನರುಗಳ ಉದ್ಯೋಗದ ವಾಯಿದೆ ಯು ಮಾಹೆ ಗುಜಷ್ಟಾ, ಮಾರ್ಚಿ 31ನೇ ತಾರೀಖಿಗೆ ಪೂರೈಸುವತ್ತೆ ಯಾಗ್ಗಿ, ಆವರುಗಳು ಮಾಹೆ ಮಜಕೂರು ಗುರ್ತೇ ಲಾಗಾಯತು ಇನ್ನೊಂದು ವರುಷದ ವರಿಗೂ ಅವರವರ ಉದ್ಯೋಗದಲ್ಲಿ ಕಾಯಂ ಇರತಕ್ಕದ್ದೆಂದು ಗವರ್ನರ್‌ಮೆಂಟಿನವರು ಮಂಜೂರ್‌ಮಾಡಿರುತ್ತಾರೆ.

ನಂಬರ್ 1ನೇ ಬಳೇಪೇಟೇ ಡಿವಿಜನ್.

ಮೆ|| ಬಿ. ಮುರಗೆಂಗಯ್ಯನವರು.
ಮೆ|| ಪಿ. ಎಸ್. ರಾಘವಾಚಾರ್ರು.

ನಂಬರ್ 2ನೇ ಮುನವಾರ್ತೇಪೇಟೇ ಡಿವಿಜನ್.

ಮೆ|| ಖಾಜೇ ಮಹಮ್ಮದ್ ಅಬೀದ್ ಷರೀಫ್ ಸಾಹೆಬರು.
ಮೆ|| ಮಂಡೀ ಮುರಿಯಣ್ಣನವರು.

ನಂಬರ್ 3ನೇ ಹಲಸೂರುಪೇಟೇ ಡಿವಿಜನ್.

ಮೆ|| ಎಸ್. ವಿ. ಅಣ್ಣಯ್ಯಪ್ಪಶೆಟ್ಟಿ.
ಮೆ|| ಪಿ. ಚೆಂಗಲರಾಯ ಮೊದಲಿಯಾರ್ರು.

ನಂಬರ್ 4ನೇ ನಗರ್ತಪೇಟೇ ಡಿವಿಜನ್.

ಮೆ|| ಬಿ. ನಾರಾಯಣ ಶಟ್ಟರು.
ಮೆ|| ದೊಡ್ಡೀ ವೆಂಕಟರಮಣ ಶಟ್ಟರು.

ನಂಬರ್ 5ನೇ ಕೆಲಾಸಿನಾಳ್ಯದ ಡಿವಿಜ್ಞ.

ಮೆ|| ರಾಮಸ್ವಾಮಿ ಕಟ್ಟ.

ನಂಬರ್ 6ನೇ ಜೈಗ್ರೌಂಡ್ ಡಿವಿಜ್ಞ.

ಮೆ|| ಜೆ. ಕ್ಯಾಮರ್ಜ.

ಕ್ಯಾಂಪ್ ನಂ. 44.—ಈ ಕೆಳಗೆ ನಮೂದಾಗುವ ಬತ್ತಿಗಳು, ವರ್ಗಾವರ್ಗಿಗಳು ವ ಮೊಕರರಾತಿಗಳು ಹುಕುಂ ಮಾಡಲ್ಪಟ್ಟವೆ,

ಬೆಂಗಳೂರು ಡಿಸ್ಟ್ರಿಕ್ಟ್ ಜೆಪ್ಯುಟಿ ಕಮ್ಮಿಷನರ್ ಮೇಜರ್ ಪಿ. ಹೆಚ್. ವ್ಯಾಕೆಟ್ಟಿರ್‌ಯವರು, ಕೆಲಸದಿಂದ ನಿವಾಲಸಾದ ಕರ್ನಲ್ ಯೆ. ಸಿ. ಪೀ ಯವರಿಗೆ ಬದಲಾಗಿ, ಮೈಸೂರು ಮಿಲಿಟರೀ ಫೀಜಿನ ಕರ್ಮಾರ್ಡೆಟರಾಗಿಯೂ ವ ಶ್ರೀಮನ್ಮಹಾರಾಜರವರ ಮಿಲಿಟರೀ ಸೆಕರೆಟರಿಯಾಗಿ, ಅವರು ಚಾರ್ಜ್ ಒಪ್ಪಿಸಿಕೊಂಡ ತಾರೀಖು ಲಾಗಾಯತು ಮೊಕರರ್ ಮಾಡಲ್ಪಟ್ಟಿರುತ್ತಾರೆ.

ಜೆಪ್ಯುಟಿ ಕಮ್ಮಿಷನರ್ ವ ಡಿಸ್ಟ್ರಿಕ್ಟ್ ಮೇಜಸ್ಟ್ರೇಟರಾದ ಮೆ|| ಪಿ. ಆರ್. ಕೃಷ್ಣಮೂರ್ತಿಯವರಿಗೆ ತುಮಕೂರು ಡಿಸ್ಟ್ರಿಕ್ಟ್‌ನಿಂದ ಬೆಂಗಳೂರು ಡಿಸ್ಟ್ರಿಕ್ಟ್‌ಗೆ ವರ್ಗ.

ಮೈಸೂರ ಬೆಂಗಳೂರ ಸಬ್ ಜಡ್ಜರಾದ ಸಿ. ಕೆ.ಸಿ ಯವರು, ತಾತ್ಕಾಲಿಕ್ಕೆ 4ನೇ ಕ್ಯಾಸ್ ಜೆಪ್ಯುಟಿ ಕಮ್ಮಿಷನರಾಗಿ ಮೊಕರರ್ ಮಾಡಲ್ಪಟ್ಟು ತುಮಕೂರು ಜೆಪ್ಯುಟಿ ಕಮ್ಮಿಷನರ್ ವ ಡಿಸ್ಟ್ರಿಕ್ಟ್ ಮೇಜಸ್ಟ್ರೇಟರಾಗಿರತಕ್ಕದ್ದು. (ಇವರು ಸಾಲೀನಾ ಬ್ಯಾಸಗೇ ರಜಾ ವಗ್ಗಿರ್ಯ ಸಬ್ ಜಡ್ಜ್ ಕೋರ್ಟು ಮುಚ್ಚಿದ ತರುವಾಯ, ಕೆಲಸದ ಮೇಲೆ ಹಾಜರಾಗತಕ್ಕದ್ದು.)

2ನೇ ಕ್ಯಾಸ್ ಜೆಪ್ಯುಟಿ ಕಮ್ಮಿಷನರ್ ಮೆ|| ಪಿ. ಆರ್. ಕೃಷ್ಣಮೂರ್ತಿಯವರು 1889ನೇ ಇಸವಿ ಮಾರ್ಚ್ 21ನೇ ತಾರೀಖು ಲಾಗಾಯತು 1ನೇ ಕ್ಯಾಸ್ ಜೆಪ್ಯುಟಿ ಕಮ್ಮಿಷನರಾಗಿರತಕ್ಕದ್ದು.

3ನೇ ಕ್ಯಾಸ್ ಜೆಪ್ಯುಟಿ ಕಮ್ಮಿಷನರ್ ಮೆ|| ವಿ. ಪಿ. ಮಾಧವರಾಯರು ಸ್ಯ 1889ನೇ ಇಸವಿ ಮಾರ್ಚ್ ತಾರೀಖು 21ರ ಲಾಗಾಯತು 2ನೇ ಕ್ಯಾಸ್ ಜೆಪ್ಯುಟಿ ಕಮ್ಮಿಷನರಾಗಿರತಕ್ಕದ್ದು.

4ನೇ ಕ್ಯಾಸ್ ಜೆ|| ಕಮ್ಮಿಷನರ್ ಮೆ|| ಪಿ. ಆರ್. ಪೂರ್ಣಯ್ಯನವರು, ಪಿಟೋ ತಾರೀಖು ಲಾಗಾಯತು 3ನೇ ಕ್ಯಾಸ್ ಜೆ|| ಕಮ್ಮಿಷನರಾಗಿರತಕ್ಕದ್ದು.

ಕರ್ನಲ್ ಜಿ. ಪಿ. ಕ್ಯಾಂಬಲ್ ಯವರು, ಮೈಸೂರ್ ದೇಶದ ಎಕ್ಸೈಜ್ ಕಮ್ಮಿಷನರಾಗಿರತಕ್ಕದ್ದು.

ಕ್ಯಾಂಪ್ ನಂ. 51.—ಮೆ|| ಪಿ. ಚಂಜಲರಾವ್ ಸಿ. ಐ. ಈ. ಯವರು ಶ್ರೀಮನ್ಮಹಾರಾಜರವರ ಕೌನ್ಸಿಲ್ಲಿನ ಮೆಂಬರಾಗಿರತಕ್ಕದ್ದೆಂದು ಶ್ರೀಮನ್ಮಹಾರಾಜ ರಾಜಾಸಾಹೆಬ್ ಬಹದ್ದೂರವರು ಮೊಕರರ್ಮಾಡಿರುತ್ತಾರೆ.

ತಾರೀಖು 23ನೇ ಏಪ್ರೆಲ್ 1889.

ನಂ. 11.—ಕಡೂರು ಡಿಸ್ಟ್ರಿಕ್ಟ್ ಪೋಲೀಸ್ ಆಕ್ಟಿಂಗ್ ಅಸಿಸ್ಟೆಂಟ್ ಕಮ್ಮಿಷನರ್ ಮೆ|| ಪಿ. ಆರ್. ಜಬ್ಬಿಯು. ವೆದರಾಲ್‌ಯವರಿಗೆ, ಮಾಹೆ ಮೆಜಕೂರು 16ನೇ ಮಕ್ತುಮಿನ 7ನೇ ನಂಬರುಳ್ಳ ಆಸ್ತಿಹ್ಕಾರನಿಂದ ಕೊಡೋಣಾದ 10 ದಿವಸಗಳ ಪ್ರಿವಿಲೀಜ್ ರಜಾವನ್ನ ಸದರಿಯವರು ಮಾಹೆ ಗುಜಷ್ತಾ 16ನೇ ತಾರೀಖು ಲಾಗಾಯತು ಉಪಯೋಗಿಸಿಕೊಂಡು ಅದೇ ತಿಂಗಳ 25ನೇ ತಾರೀಖಿನ ಪೂರ್ವಾನ್ಹದಲ್ಲಿ ಕೆಲಸದ ಮೇಲೆ ಪುನಶ್ಚ ಬಂದಿರುತ್ತಾರಾಗಿ, ಅವರು ಉಪಯೋಗಿಸಿಕೊಳ್ಳದೇ ಉಳಿದಿರುವ ಬಂದು ದಿವಸದ ರಜಾವನ್ನ ಇದರಿಂದ ರದ್ದು ಮಾಡೋಣಾಗಿರುತ್ತೆ.

ನಂ. 12—ಬೆಂಗಳೂರು ಪ್ಯಾರ್ಟಿಕ್ಯೂರ್ ಇಂಚಾರ್ಜ್ ಅಸಿಸ್ಟೆಂಟ್ ಕಸ್ಟಮರ್‌ವೇಟರ್ ಮೆ|| ಬಾಪೂರಾಯರಿಗೆ 1889ನೇ ಇಸವಿ ಫೆಬ್ರವರಿ 5ನೇ ಮಕ್ತುಮಿನ 7140—7—200ನೇ ನಂಬರುಳ್ಳ ಪ್ರೊಸಿಡಿಂಗ್ಸಿನ ನಿಯಮವನ್ನನುಸರಿಸಿ 10 ದಿವಸಗಳ ಕ್ಯಾಜ್ಯುಯಲ್ ರಜಾ ಕೊಡಲ್ಪಟ್ಟಿರುತ್ತೆ.

ತಾರೀಖು 24ನೇ ಏಪ್ರೆಲ್ 1889.

ನಂ. 15.—ಖಜಾನಾ ಬಕ್ಷಿ ಮೆ|| ಎ. ವೀರಾಸಾಮಿ ಮೊದಲಿಯಾರ್‌ಗೆ ಸ್ಯ 1889ನೇ ಇಸವಿ ಮಾರ್ಚ್ 18ರ ಲಾಗಾಯತು 26ನೇ ತಾರೀಖು ವರೆಗೆ ಪೊಂಭತ್ತು ದಿವಸಗಳ ಕ್ಯಾಜ್ಯುಯಲ್ ರಜಾ ಕೊಡಲ್ಪಟ್ಟಿರುತ್ತೆ.

ನಂ. 16.—ಚನ್ನರಾಯಪಟ್ಟಣ ತಾಲ್ಲೂಕು ಅಮಲ್ದಾರ್ ರಾಮಾನುಜಯ್ಯಂಗಾರ್ಯಿಗೆ, ಅವರು ಉಪಯೋಗಿಸಿಕೊಳ್ಳುವ ತಾರೀಖು ಲಾಗಾಯತು ಬಂದು ತಿಂಗಳೂ ಇಪ್ಪತ್ತೆರಡು ದಿವಸಗಳ ಪ್ರಿವಿಲೀಜ್ ರಜಾ ಕೊಡಲ್ಪಟ್ಟಿರುತ್ತೆ.

ರಾಮಾನುಜಯ್ಯಂಗಾರ್ರು ರಜಾದ ಮೇಲೆ ಇರುವ ಪರ್ಯಂತ ಯಾ ಮತ್ತೊಂದು ಹುಕುಂ ಕೊಡುವವರೆಗೂ ಆಸನ ಡಿಸ್ಟ್ರಿಕ್ಟ್ ಆಫೀಸ್ ರವಿನ್ಯೂ ಹೆಡ್ ಅಕೌಂಟೆಂಟ್ ಎಸ್. ವೆಂಕಟರಮಣಯ್ಯನವರು, ಚನ್ನರಾಯಪಟ್ಟಣ ತಾಲ್ಲೂಕು 5ನೇ ಕ್ಯಾಸ್ ಅಮಲ್ದಾರ್ ವ 3ನೇ ಕ್ಯಾಸ್ ಮೇಜಸ್ಟ್ರೇಟ್ ಕೆಲಸವನ್ನ ಆಕ್ಟಿಂಗ್ ತರೀಕ್ ನೋಡುವಂತೆ ಮೊಕರರ್ಮಾಡಲ್ಪಟ್ಟಿರುತ್ತಾರೆ.

ನಂ. 17.—ಫಾರೆಸ್ಟ್ ಸೂಪರ್ಣಟೆಂಡೆಂಟ್ ಮೆ|| ಸಿ. ಈ. ಯಂ. ರಸ್ಸೆಲ್ ಯವರು, ಮೈಸೂರು ಡಿಸ್ಟ್ರಿಕ್ಟಿನಿಂದ ಬೆಂಗಳೂರು ಡಿಸ್ಟ್ರಿಕ್ಟಿಗೆ ವರ್ಗಮಾಡಲ್ಪಟ್ಟಿರುತ್ತಾರೆ.

ಅಸಿಸ್ಟೆಂಟ್ ಕ್ಯಸರ್‌ವೇಟರ್ ಮೆ|| ಸಿ. ನಾರಾಯಣರಾಯರಿಗೆ, ಬೆಂಗಳೂರಿಂದ ಮೈಸೂರು ಡಿಸ್ಟ್ರಿಕ್ಟಿಗೆ ವರ್ಗಮಾಡೋಣಾಗಿಧೆ.

ಮೆ|| ರಸ್ಸೆಲ್‌ಯವರು ರಜಾದ ಮೇಲೆ ಇರುವ ಪರ್ಯಂತ ಯಾ ಮತ್ತೊಂದು ಹುಕುಂ ಕೊಡುವ ವರಿವಿಗೂ ಸಬ್ ಅಸಿಸ್ಟೆಂಟ್ ಕ್ಯಸರ್‌ವೇಟರ್ ವ ಪ್ಲಾಂಟೇಷ್ ಇನ್‌ಚಾರ್ಜ್ ಆಫಿಸರ್ ಮೆ|| ಯಸ್. ಎ. ಬಾಪೂರಾಯರು ಬೆಂಗಳೂರು ಡಿಸ್ಟ್ರಿಕ್ಟು ಫಾರೆಸ್ಟ್ ಸೂಪರ್ಣಟೆಂಡೆಂಟ್ ಕೆಲಸವನ್ನ ಆಕ್ಟಿಂಗ್ ತರೀಕ್ ನೋಡುವಂತೆ ಮೊಕರರ್ಮಾಡಲ್ಪಟ್ಟಿರುತ್ತಾರೆ.

ನಂ. 18.—ತುರುವೇಕೆರೆ ಡಿ|| ಅಮಲ್‌ದಾರ್ ಮಹಮ್ಮದ್‌ಅಲ್ಲಿಖಾನ್ ಯವರಿಗೆ 1888ನೇ ಇಸವಿ ಡಿಶಂಬರ್ 17ನೇ ಮರ್ಕುಂ 160ನೇ ನಂಬರುಳ್ಳ ಇಸ್ತಿಹಾರಿನಿಂದ ಕೊಡಲ್ಪಟ್ಟಿದ್ದ 15 ದಿವಸಗಳ ಪ್ರಿವಿಲೀಜ್ ರಜಾಕ್ಕೆ ಜಾಸ್ತಿಯಾಗಿ 5 ದಿವಸಗಳ ಪ್ರಿವಿಲೀಜ್ ರಜಾ ಕೊಡಲ್ಪಟ್ಟಿರುತ್ತೆ.

ನಂ. 19.—ಮದ್ದಗಿರಿ ತಾಲ್ಲೂಕು ಅಮಲ್‌ದಾರ್ ಶಾಮಯ್ಯಂಗಾರ್ರಿಗೆ, 1889ನೇ ಇಸವಿ ಜನವರೀ 11ನೇ ಮರ್ಕುಮಿನ 175ನೇ ನಂಬರ್ ಇಸ್ತಿಹಾರಿನಿಂದ ಕೊಡಲ್ಪಟ್ಟಿದ್ದ ನಾಲ್ಕು ತಿಂಗಳೂ ಯರಡು ದಿವಸಗಳ ಪ್ರೈವೇಟ್ ಅಫೇರ್ಸ್ ರಜಾಕ್ಕೆ ಜಾಸ್ತಿಯಾಗಿ ಯಿನ್ನೂ ಯರಡು ದಿವಸಗಳ ರಜಾ ಕೊಡಲ್ಪಟ್ಟಿರುತ್ತೆ.

ನಂ. 20.—ಹೊಳೇನರಸೀಪುರದ ತಾಲ್ಲೂಕು ಅಮಲ್‌ದಾರ್ ವಿ. ಪಾರ್ಥಸಾರಥಯ್ಯಂಗಾರ್ರಿಗೆ, 1889ನೇ ಇಸವಿ ಮೇ 2ನೇ ತಾರೀಖು ಲಾಗಾಯತು ಯಾ ಅವರು ವುಪಯೋಗಿಸಿಕೊಳ್ಳುವ ತಾರೀಖು ಲಾಗಾಯತು ಯರಡು ತಿಂಗಳ ಪ್ರಿವಿಲೀಜ್ ರಜಾ ಕೊಡಲ್ಪಟ್ಟಿರುತ್ತೆ.

ಪಾರ್ಥಸಾರಥಯ್ಯಂಗಾರ್ರು ರಜಾದಮೇಲೆ ಯಿರುವ ಪರ್ಯಂತ ಯಾ ಮತ್ತೊಂದು ಹುಕುಂ ಕೊಡುವ ವರಿವಿಗೂ ಗ್ರಾಮದ ಸಬ್ ತಾಲ್ಲೂಕು ಡೆಪ್ಯುಟಿ ಅಮಲ್‌ದಾರ್ ಕೃಷ್ಣರಾಯರು ಹೊಳೇನರಪುರದ ತಾಲ್ಲೂಕು 5ನೇ ಕ್ಯಾಸ್ ಅಮಲ್‌ದಾರ್ ವ 3ನೇ ಕ್ಯಾಸ್ ಮಾಜಿಸ್ಟ್ರೇಟ್ ಕೆಲಸವನ್ನ ಆಕ್ಟಿಂಗ್ ತರೀಕ್ ನೋಡುವಂತೆ ಮೊಕರರ್ ಮಾಡಲ್ಪಟ್ಟಿರುತ್ತಾರೆ.

ಕೃಷ್ಣರಾಯರು ಇತರ ನೌಕರೀಮೇಲೆ ಯಿರುವ ಪರ್ಯಂತ ಯಾ ಮತ್ತೊಂದು ಹುಕುಂ ಕೊಡುವ ವರಿವಿಗೂ ಹಾಸನ ಡಿಸ್ಟ್ರಿಕ್ಟು ಆಫಿಸ್ ಜುಡಿಷಿಯಲ್ ಹೆಡ್ ಮುನಸಿ ಕೃಷ್ಣಪ್ಪನವರು ಗ್ರಾಮದ ಸಬ್ ತಾಲ್ಲೂಕು ಡೆಪ್ಯುಟಿ ಅಮಲ್‌ದಾರ್ ವ 3ನೇ ಕ್ಯಾಸ್ ಮಾಜಿಸ್ಟ್ರೇಟ್ ಕೆಲಸವನ್ನ ಆಕ್ಟಿಂಗ್ ತರೀಕ್ ನೋಡುವಂತೆ ಮೊಕರರ್ ಮಾಡಲ್ಪಟ್ಟಿರುತ್ತಾರೆ.

ತಾರೀಖು 25ನೇ ಏಪ್ರೆಲ್ 1889.

ನಂ. 14.—ಸೊರಬ ತಾಲ್ಲೂಕು ಅಮಲ್‌ದಾರ್ ಎ, ವೀರರಾಘವಲು ನಾಯಡ್‌ಯವರಿಗೆ, ಅವರು ವುಪಯೋಗಿಸಿಕೊಳ್ಳುವ ತಾರೀಖ್ ಲಾಗಾಯತು ಯರಡು ತಿಂಗಳ ಪ್ರಿವಿಲೀಜ್ ರಜಾ ಕೊಡಲ್ಪಟ್ಟಿರುತ್ತದೆ.

ವೀರರಾಘವಲುನಾಯಡ್‌ಯವರು ರಜಾದ ಮೇಲೆ ಯಿರುವ ಪರ್ಯಂತ ಯಾ ಮತ್ತೊಂದು ಹುಕ್ಕುಂ ಕೊಡುವವರಿವಿಗೂ, ಶಿವಮೊಗ್ಗಾ ತಾಲ್ಲೂಕು ಪೊಲೀಸ್ ಇನ್‌ಸ್ಪೆಕ್ಟರ್ ಜಿ. ಹನುಮಂತರಾಯರು ಸೊರಬ ತಾಲ್ಲೂಕು 5ನೇ ಕ್ಯಾಸ್ ಅಮಲ್‌ದಾರ್ ವ 3ನೇ ಕ್ಯಾಸ್ ಮಾಜಿಸ್ಟ್ರೇಟ್ ಕೆಲಸವನ್ನ ಆಕ್ಟಿಂಗ್ ತರೀಕ್ ನೋಡುವಂತೆ ಮೊಕರರ್ಮಾಡಲ್ಪಟ್ಟಿರುತ್ತಾರೆ.

ತಾರೀಖು ನೇ ಏಪ್ರೆಲ್ 1889.

ನಂ. 21.—ತುಮಕೂರು ತಾಲ್ಲೂಕು ಅಮಲ್‌ದಾರ್ ಹೇಮಾಹನುಮಂತಯ್ಯನವರಿಗೆ, ಕ್ರಿಮಿನಲ್ ಪ್ರೊಸಿಡ್ಯೂರ್ ಕೋಡಿನ 12ನೇ ಸೆಕ್ಷನ್ ಅನುಸರಿಸಿ 2ನೇ ಕ್ಯಾಸ್ ಮಾಜಿಸ್ಟ್ರೇಟರ ಅಧಿಕಾರಗಳು ಕೊಡಲ್ಪಟ್ಟಿರುತ್ತವೆ.

ತಾರೀಖು 21ನೇ ಡಿಶಂಬರ್ 1888.

ಕಾರ್ಯಾರ್ಥ ದಿವಾನರವರನ್ನು, ಭೇಟಿ ಮಾಡುವದಕ್ಕೆ ಅಪೇಕ್ಷಿಸುವ ದೊಡ್ಡಮನುಷ್ಯರು ಶುಕ್ರವಾರಗಳಲ್ಲಿ ಮಧ್ಯಾನ್ಹಾತ್ಪರ 2 ಘಂಟೆಗೆ ಕಛೇರಿಗೆ ಬರತಕ್ಕದ್ದು. ಈ ಬಗ್ಯಾಗಿ ಹಿಂದಿನ ದಿನ ಚೀಫ್ ಸೆಕ್ರಿಟೆರಿಯವರಿಗೆ ತಮ್ಮ ಕಾರ್ಡ್‌ಗಳನ್ನು ಕಳುಹಿಸತಕ್ಕದ್ದು.

2. ಬೆಂಗಳೂರು ಆಫಿಸಿನಲ್ಲಿಯಿಡಲ್ಪಟ್ಟಿರುವ ಅರ್ಜೀಪೆಟ್ಟಿಗೆಯು ದಿನವಹೀ ಚೀಫ್ ಸೆಕ್ರಿಟೆರಿಯವರಿಂದಲೂ, ಅವರು ಬೆಂಗಳೂರಲ್ಲಿ ಯಿಲ್ಲದ ಕಾಲದಲ್ಲಿ ಅಂಡರ್ ಸೆಕ್ರಿಟೆರಿಯವರಿಂದಲೂ ಮಧ್ಯಾನ್ಹ 12 ಘಂಟೆಗೆ ತೆಗಿಯಲ್ಪಟ್ಟು ಅದರಲ್ಲಿನ ಅರ್ಜೀಗಳು ತೆಗದುಕೊಳ್ಳಲ್ಪಡುವದು.

3 ಅರ್ಜೀದಾರರುಗಳು ಶುಕ್ರವಾರ ದಿವಸ ಮಧ್ಯಾನ್ಹಾತ್ಪರ 3 ಘಂಟೆಗೆ ಕಛೇರಿಯಲ್ಲಿ ಕೇಳಲ್ಪಡುವರು.

ಬಮೋಜೀಬ್ ಹುಕುಂ,
ಆರ್. ವಿಜಯೀಂದ್ರರಾವ್.
ಚೀಫ್ ಸೆಕ್ರಿಟೆರಿ.

ದಿವಾನರವರು, ಅವರ ಭೇಟಿ ಮಾಡಲಿಛ್ಛೆಯುಳ್ಳ ದೊಡ್ಡಮನುಷ್ಯರುಗಳನ್ನು ಪ್ರತಿ ಶನಿವಾರದ ದಿವಸ ಮಧ್ಯಾನ್ಹ 12 ಘಂಟೆ ಲಾಗಾಯತು 2 ಘಂಟೆ ಪರಿಯಂತ ತಮ್ಮ ವಾಸಸ್ಥಾನದಲ್ಲಿ ಬರಮಾಡಿಕೊಳ್ಳುವರು.

ನೇಟಿವ್ ದೊಡ್ಡಮನುಷ್ಯರುಗಳು ಅವರಿಗೆ ಯಿಷ್ಟವಿರುವ ಪಕ್ಷಕ್ಕೆ ಅದೇ ದಿವಸ ಮಧ್ಯಾನ್ಹಾತ್ಪರ 3 ಘಂಟೆಗೆ ಬರಬಹುದು.

ಹುಕುಂ ಬಮೋಜೀಬ್,
ಕೆ. ದೊರಸಾಮಿಅಯ್ಯರ್,
ಪ್ರೈವೇಟ್ ಸೆಕ್ರಿಟೆರಿ.